## ನಿಮ್ಮೊಡನೆ

# ಲೆಕ್ಕಾಚಾರ ತಪ್ಪಿದ್ದೆಲ್ಲಿ?

**ಗ್ರಾಮೀಣ ವಿದ್ಯಾರ್ಥಿಗಳು ಕನ್ನಡ ಕಲಿಕೆಯಲ್ಲೂ ಹಿಂದೆ ಬಿದ್ದಿರುವುದು ಇತ್ತೀಚಿನ ವಿದ್ಯಮಾನ. ಕೆಲವು ವರ್ಷಗಳ ಹಿಂದೆ ಈ ಪರಿಸ್ಥಿತಿ ಇರಲಿಲ್ಲ. ಇತ್ತ ಇಂಗ್ಲಿಷ್ ಇಲ್ಲ, ಅತ್ತ ಮಾತೃಭಾಷೆ ಕಲಿಕೆಯೂ ಸರಿ ಇಲ್ಲ ಎಂಬುದು ಇಂದಿನ ಸ್ಥಿತಿಯಾಗಿದೆ.**

ಗ್ರಾಮೀಣ ಜನತೆಯ ವಿವೇಕ ಎಂತಹ ಅದ್ಭುತ ಎಂದರೆ 'ಬಾಯಿಲೆಕ್ಕ'ದಲ್ಲಿ ಅವರು ಸದಾ ಮುಂದು. ಆದರೆ ಆಧುನಿಕ ಶಿಕ್ಷಣ ಕಲಿಯುವ ಅವರ ಮಕ್ಕಳು ಮಾತ್ರ ಲೆಕ್ಕದಲ್ಲಿ ಹಿಂದೆ! ಇದೊಂದು ವಿಪರ್ಯಾಸ. ಕಾನ್ವೆಂಟ್ ಶಿಕ್ಷಣದ ಸೌಲಭ್ಯ ಪಡೆದ ಸ್ಥಿತಿವಂತರ ಕೆಲವು ಮಕ್ಕಳನ್ನು ಹೊರತುಪಡಿಸಿದರೆ, ಎಲ್ಲ ಮಕ್ಕಳು ಇಂಗ್ಲಿಷ್ ಭಾಷೆಯಲ್ಲಿ ಹಿಂದಿದ್ದಾರೆ. ಸಹಜವಾಗಿ ಗ್ರಾಮೀಣ ಮಕ್ಕಳು ಸಹ ಇಂಗ್ಲಿಷ್‌ನಲ್ಲಿ ಹಿಂದಿದ್ದಾರೆ. ಸರ್ವ ಶಿಕ್ಷಣ ಅಭಿಯಾನ, ಕಡ್ಡಾಯ ಶಿಕ್ಷಣ ಕಾಯ್ದೆಯನ್ನು ಜಾರಿಗೊಳಿಸಿದ ನಂತರವೂ ಪ್ರಾಥಮಿಕ ಶಿಕ್ಷಣದಲ್ಲಿ ಹೇಳಿಕೊಳ್ಳುವಂತಹ ಬದಲಾವಣೆ ಆಗಿಲ್ಲ.

ಪ್ರಥಮ್ ಸಂಸ್ಥೆ ಸಹಯೋಗದಲ್ಲಿ ಶಿಕ್ಷಣ ಇಲಾಖೆ ಸಿದ್ಧಪಡಿಸಿದ ಪ್ರಸಕ್ತ ವರ್ಷದ ಶೈಕ್ಷಣಿಕ ವಾರ್ಷಿಕ ಸ್ಥಿತಿಗತಿ ವರದಿಯು ಗ್ರಾಮೀಣ ಮಕ್ಕಳು ಲೆಕ್ಕ ಹಾಗೂ ಇಂಗ್ಲಿಷ್ ವಿಷಯಗಳಲ್ಲಿ ಹಿಂದುಳಿದಿರುವುದನ್ನು ಬಹಿರಂಗಪಡಿಸಿದೆ. ಕೇಂದ್ರ ಮಾನವ ಸಂಪನ್ಮೂಲ ಸಚಿವರು ಈ ವರದಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಿದ್ದಾರೆ. ಇಂಗ್ಲಿಷ್ ಭಾಷೆ ಕಲಿಕೆ ಆರಂಭಿಸಿದ 5ನೇ ತರಗತಿ ವಿದ್ಯಾರ್ಥಿಗಳಲ್ಲಿ– ವರ್ಷ ಪೂರೈಸಿದ ನಂತರ, ಇಂಗ್ಲಿಷ್ ಅಕ್ಷರಗಳನ್ನು ಗುರುತಿಸಬಲ್ಲವರ ಸಂಖ್ಯೆ ಶೇ.21 ಮಾತ್ರ. ಕಳೆದ 5 ವರ್ಷಗಳಿಂದ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಪರಿಚಯಿಸಲಾಗುತ್ತದೆ. ಆದರೂ ಪರಿಸ್ಥಿತಿ ಸುಧಾರಿಸಿಲ್ಲ. ಇನ್ನು ಲೆಕ್ಕದ ವಿಷಯ: 1ನೇ ತರಗತಿಯಿಂದಲೇ ಲೆಕ್ಕ ಕಲಿಸಲಾಗುತ್ತದೆ. 3ನೇ ತರಗತಿ ತಲುಪಿದ ನಂತರವೂ 1ರಿಂದ 10ರ ವರೆಗಿನ ಸಂಖ್ಯೆಗಳನ್ನು ಗುರುತಿಸಲು ಶೇ.5.3ರಷ್ಟು ಮಕ್ಕಳು ಪರದಾಡುತ್ತಾರೆ. ಮೂಲ ಸೌಕರ್ಯ ತಲುಪಿಸುವಲ್ಲಿ ಆಗುತ್ತಿರುವ ವಿಳಂಬ, ತಂತ್ರಜ್ಞಾನದ ಬಳಕೆಯ ಕೊರತೆ– ಗ್ರಾಮೀಣ ಮಕ್ಕಳು ಈ ಎರಡು ವಿಷಯಗಳಲ್ಲಿ ಹಿಂದುಳಿಯಲು ಕಾರಣ ಎಂದು ವರದಿ ವಿಶ್ಲೇಷಿಸಿದೆ. ಕಾರಣ ಇಷ್ಟೇ ಇರಲಾರದು. ಗ್ರಾಮೀಣ ಜನತೆ ಲೆಕ್ಕದಲ್ಲಿ ಜಾಣರು. ಅಂತಹದೊಂದು ಪಾರಂಪರಿಕ ವಿಧಾನವನ್ನು ಆಧುನಿಕತೆಗೆ ಕಸಿ ಮಾಡಿದ್ದರೆ, ಗ್ರಾಮೀಣ ವಿದ್ಯಾರ್ಥಿಗಳು ಲೆಕ್ಕದಲ್ಲಿ ಹಿಂದುಳಿಯಲು ಕಾರಣಗಳೇ ಇರಲಿಲ್ಲ. ಆಧುನಿಕ ಶಿಕ್ಷಣ ವಿಧಾನವನ್ನು ಅನುಷ್ಠಾನಗೊಳಿಸುವ ಆರಂಭದ ದಿನಗಳಲ್ಲೇ ಎಡವಿರುವುದು ಇದರಿಂದ ಗೋಚರವಾಗುತ್ತದೆ.

ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವ ಅವಕಾಶದಿಂದ ಏಕೆ ವಂಚಿತರಾಗಬೇಕು ಎಂಬ ವಾದ ಮತ್ತು ಬೇಡಿಕೆಗಳ ಕುರಿತು ಸರಿಯಾದ ನಿಲುವು ಕೈಗೊಳ್ಳದ ಸರ್ಕಾರ ತನ್ನ ಎಡಬಿಡಂಗಿ ನಿಲುವನ್ನು ಮುಂದುವರಿಸಿದೆ. ಈ ಕಾರಣಕ್ಕೆ ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆ ಕಲಿಕೆಯಲ್ಲೂ ಹಿಂದೆ ಬಿದ್ದಿದ್ದಾರೆ! ಶೇ.5.3ರಷ್ಟು ಮಕ್ಕಳು 3ನೇ ತರಗತಿಗೆ ಬಂದಾಗಲೂ ತಮ್ಮ ಮಾತೃಭಾಷೆಯ ಅಕ್ಷರಗಳನ್ನು ಸರಿಯಾಗಿ ಗುರುತಿಸಲು ಪರದಾಡುತ್ತಾರೆ. ಇದು ಇತ್ತೀಚಿನ ವರ್ಷಗಳ ವಿದ್ಯಮಾನ. ಕೆಲವು ವರ್ಷಗಳ ಹಿಂದೆ ಈ ಪರಿಸ್ಥಿತಿ ಇರಲಿಲ್ಲ. ಮಾತೃಭಾಷೆ ಕಲಿಕೆಯಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ಮುಂದಿದ್ದರು. ಇತ್ತ ಇಂಗ್ಲಿಷ್ ಇಲ್ಲ, ಅತ್ತ ಮಾತೃಭಾಷೆ ಕಲಿಕೆಯೂ ಸರಿ ಇಲ್ಲ ಎಂಬುದು ಇಂದಿನ ಸ್ಥಿತಿಯಾಗಿದೆ. ಕನ್ನಡ ಅಕ್ಷರ ಕಲಿಕೆಯ ವಿಷಯದಲ್ಲಿ ಉರು ಹೊಡೆಯುವ ಕೆಲವು ಪಾರಂಪರಿಕ ವಿಧಾನಗಳನ್ನು ಆಧುನಿಕ ಶಿಕ್ಷಣದಲ್ಲಿ ಮುಂದುವರಿಸಿದ್ದರೆ, ಈ ಹಿಂದೆ ಇದ್ದಂತೆ ಕನ್ನಡದಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ಮುಂದಿರುತ್ತಿದ್ದರೆ? ಶಿಕ್ಷಣ ತಜ್ಞರು ಮರು ಅಧ್ಯಯನ ಕೈಗೊಳ್ಳಬೇಕಾದ ವಿಷಯ ಇದು.

ಶೇ.98.5ರಷ್ಟು ಸಾಧನೆ ಮಾಡಿದ ಬಿಸಿಯೂಟ ಯೋಜನೆ ಮಾತ್ರ ಸಮಾಧಾನಕರವಾಗಿದೆ. 2011ರಲ್ಲಿ ಶೇ.94ರಷ್ಟು ಅಡುಗೆ ಕೋಣೆಗಳು ಲಭ್ಯವಿದ್ದದ್ದು ಸಹ ಇದಕ್ಕೆ ಕಾರಣವಾಗಿದೆ. ಆದರೆ ಶಾಲಾ ಕೊಠಡಿ, ಕುಡಿಯುವ ನೀರು, ಶೌಚಾಲಯಗಳ ಕೊರತೆ ಮಾತ್ರ ಹಾಗೇ ಮುಂದುವರಿದಿದೆ. ಖಾಲಿ ಇರುವ ಶಿಕ್ಷಕರ ಹುದ್ದೆ ಭರ್ತಿ ಕಾಲಕಾಲಕ್ಕೆ ಆಗುತ್ತಿಲ್ಲ. ಸರ್ಕಾರದ ವರದಿಯೇ ಈ ಎಲ್ಲ ಅಂಶಗಳನ್ನು ಬಹಿರಂಗಪಡಿಸಿದೆ.

ಲೆಕ್ಕ ಹಾಗೂ ಇಂಗ್ಲಿಷ್ ವಿಷಯಗಳಲ್ಲಿ ಹಿಂದುಳಿದಿರುವಿಕೆ ಗ್ರಾಮೀಣ ಮಕ್ಕಳಿಗೆ ಮಾತ್ರ ಮೀಸಲಲ್ಲ. ನಗರ, ಪಟ್ಟಣಗಳ ಬಹುದೊಡ್ಡ ಸಮುದಾಯದಲ್ಲೂ ಇದೇ ಪರಿಸ್ಥಿತಿ ಇದೆ. ಕಾನ್ವೆಂಟ್ ಅಥವಾ ಸರ್ಕಾರಿ– ಎಲ್ಲಿಯೇ ಪ್ರಾಥಮಿಕ ಶಾಲೆಯ ಶಿಕ್ಷಣ ಪೂರೈಸಿರಲಿ, ಅಲ್ಲಿಂದ ಪಿಯುಸಿ ವಿಜ್ಞಾನ ವಿಷಯಕ್ಕೆ ಬಂದ ತಕ್ಷಣ 'ಡುಮ್ಕಿ' ಹೊಡೆಯುವವರ ಸಂಖ್ಯೆ ನಗರಗಳಲ್ಲಿ ಅಪಾರವಾಗಿರುವ ಅಂಶವನ್ನೂ ಅಧ್ಯಯನ ಬಹಿರಂಗಪಡಿಸಿದೆ. ಇದಕ್ಕೂ ಲೆಕ್ಕದ ಕಲಿಕೆ ವಿಧಾನ ಹಾಗೂ ಇಂಗ್ಲಿಷ್ ಮಾಧ್ಯಮವೇ ಕಾರಣ. ಹಾಗಾದರೆ ಲೆಕ್ಕಾಚಾರ ತಪ್ಪಿದ್ದೆಲ್ಲಿ?

■ **ಗುಡಿಹಳ್ಳಿ ನಾಗರಾಜ**




ವಿಷ್ಣು